

# ಫಜೀತಿ!

ಓದೋಕೆ ಕೂತ್ರೆ
ಅಮ್ಮ ಕರೀತಾರೆ
ಪಾತ್ರೆ ಜೋಡಿಸಿ ಇಡ್ಬೇಕು

ಆಡೋಕೆ ಹೋದ್ರೆ
ಅಪ್ಪ ಕರೀತಾರೆ
ಪೇಟೆಗೆ ಹೋಗಿಬರ್ಬೇಕು

ಟೀವಿ ನೋಡ್ತಿದ್ರೆ
ತಂಗಿ ಬರ್ತಾಳೆ
ಲೆಕ್ಕ ಹೇಳಿಕೊಡ್ಬೇಕು

ಮಲಗೋಕೆ ಹೋದ್ರೆ
ಅಜ್ಜಿ ಕರೀತಾಳೆ
ಕನ್ನಡಕ ಹುಡುಕಿಕೊಡ್ಬೇಕು

ಇಷ್ಟೆಲ್ಲ ಮಾಡಿದ್ರು
ಮತ್ತೆ ಬೈತಾರೆ:
'ದನಾ ಕಾಯೋಕೆ ಹೋಗ್ಬೇಕು!'